<u>ದಿನಾಂಕ:30.10.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು: ಶ್ರೀ ಎಂ.ಎಸ್.ವಿ., ಪ್ರತಿವಾದಿ ಪರ ವಕೀಲರಿಂದ</u>

ನಿ.ಪಿ.45 ರ ಪಹಣಿ ಪತ್ರಿಕೆಯನ್ನು ದಾವಾ ದಾಖಲಿಸುವ ಕಾಲಕ್ಕೆ ನ್ಯಾಯಾಲಯದ ಮುಂದೆ ಸಲ್ಲಿಸಿದ್ದೇನು ಎಂದರೆ ಸರಿ. ನಿ.ಪಿ.45 ರ ಪಹಣಿ ಪತ್ರಿಕೆಯಂತೆ ಪ್ರತಿವಾದಿಯವರ ಹೆಸರಿನಲ್ಲಿ ನಮೂದು ಇರುತ್ತವೆ ಎಂದರೆ ಸರಿ. ನಿ.ಪಿ.46 ರಿಂದ 48 ಮುಟೇಷನ್ ಆದೇಶವು ಪ್ರತಿವಾದಿಯವರ ಕುಟುಂಬದಲ್ಲಿ ನಡೆದಂತಹ ವ್ಯವಹಾರಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿ. ನಿ.ಪಿ.46 ರಿಂದ 48 ರ ದಾಖಲೆಗಳನ್ನು ಸಹ ನಾನು ದಾವಾ ದಾಖಲಿಸುವ ಕಾಲಕ್ಕೆ ನ್ಯಾಯಾಲಯದ ಮುಂದೆ ಸಲ್ಲಿಸಿದ್ದೇನು ಎಂದರೆ ಸರಿ.



ನಿ.ಪಿ.46 ರಿಂದ 48 ರ ಮುಟೇಷನ್ ಆದೇಶಗಳನ್ನು ಪ್ರಶ್ನಿಸಿ ನಾನು ಇಲ್ಲಿಯವರೆಗೆ ಭೂ ಕಂದಾಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಕುರಿತು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ನಾನು ಇದೇ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.49 ರಿಂದ 53 ರ ಛಾಯ ಚಿತ್ರಗಳಿಗೆ ಸಂಬಂಧಿಸಿದಂತೆ ನಾನು ಸಿ.ಡಿ.ಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಿ.ಡಿ. ಇರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.49 ರಿಂದ 53 ರ ಛಾಯ ಚಿತ್ರಗಳಿಗೆ ಸಂಬಂಧಿಸಿದಂತೆ ನಾನು ನೆಗೆಟಿವ್ಸ್ ಹಾಜರುಪಡಿಸಿಲ್ಲ ಎಂದರೆ ಸರಿ. ನಿ.ಪಿ.49 ರಿಂದ 53 ರ ಛಾಯ ಚಿತ್ರಗಳಲ್ಲಿ ಪ್ರತಿವಾದಿಯವರು ಯಾರು ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯು ಅವರು ಬೇಕು ಅಂತನೇ ಕಾಣಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.49 ರಿಂದ 53 ರ ಛಾಯ ಚಿತ್ರಗಳಲ್ಲಿ ಎಲ್ಲಿಯೂ ಕೂಡ ರಾಮಚಂದ್ರಪ್ಪ ಕಂಡು ಬಂರುವುದಿಲ್ಲ ಎಂದರೆ ಸರಿ. ನಾನು, ನನ್ನ ಗಂಡ ಹಾಗೂ ನನ್ನ ಅತ್ತೆ ಪ್ರತಿವಾದಿಯವರಿಗೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಪ್ರತಿವಾದಿಯವರು ಯಾವುದೇ ರೀತಿ ಸಂಬಂಧ ಇಲ್ಲದಿರುವ ಕಾರಣಕ್ಕೆ ನಿ.ಪಿ.49 ರಿಂದ 53 ರ ಛಾಯ ಚಿತ್ರಗಳಲ್ಲಿ ಪ್ರತಿವಾದಿಯವರು ಕಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ನಿ.ಪಿ.54 ರ ಪಡಿತರ ಚೀಟಿ ಚಳ್ಳಕೆರೆ ಪಟ್ಟಣಕ್ಕೆ ಸಂಬಂಧಿಸಿರುವುದಿಲ್ಲ, ಆದರೆ ಅದು

ಚಿತ್ರದುರ್ಗ ನಗರದ ಚೋಳಗುಡ್ಡ ಬಡಾವಣೆಗೆ ಸಂಬಂಧಿಸಿರುತ್ತದೆ ಎಂದರೆ ಸಾಕ್ಷಿಯು ನಾವು ಅಲ್ಲೆ ಇದ್ದೇವು. ನಿ.ಪಿ.54 ರ ಪಡಿತರ ಚೀಟಿಯಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಆ ಕಾಲಕ್ಕೆ ನನ್ನ ಮದುವೆ ಆಗಿರಲಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.54 ರ ಪಡಿತರ ಚೀಟಿಯಲ್ಲಿ ರಾಮಚಂದ್ರಪ್ಪ ಇವರ ತಂದೆಯ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.54 ರ ಪಡಿತರ ಚೀಟಿಯು ಪ್ರತಿವಾದಿಯವರಿಗೆ ಯಾವುದೇ ರೀತಿ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.45 ರಿಂದ 54 ರ ದಾಖಲೆಗಳನ್ನು ನನ್ನ ವಿಚಾರಣೆ ಮುಗಿದ ನಂತರ ಉದ್ದೇಶ ಪೂರ್ವಕವಾಗಿ ಸೃಷ್ಟಿ ಮಾಡಿಕೊಂಡು ಈ ಹಂತದಲ್ಲಿ ಅವುಗಳನ್ನು ನಿಶಾನೆಗೆ ಒಳಪಡಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.